ಶ್ರೀ ಜಗದೀಶ್ ಶೆಟ್ಟರ್:- ನಾನು ಕೇಳುತ್ತಿರುವುದು ಹಣದ ಬಗ್ಗೆ, 55 ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಆಗುತ್ತದೆಯೋ ಇಲ್ಲವೋ ಅದನ್ನು ಹೇಳಿ. 132 ಕೋಟಿಯೊಳಗೆ 55 ಕೋಟಿ ರೂಪಾಯಿಗಳನ್ನು ಕೊಡಬೇಕು, ಈಗ ತಾನೇ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದರು. ಅದನ್ನು ಹೇಳಿ.

ಶ್ರೀ ಹೆಚ್.ಸಿ. ಶ್ರೀ ಕಂಠಯ್ಯ:- ಯಾವುದು 55 ಕೋಟಿ ರೂಪಾಯಿ? ಒಂದು ವಾರದೊಳಗೆ ಇನ್‌ಶ್ಯೂರೆನ್ಸ್ ಹಣ ಡಿಸ್‌ಬರ್ಸ್ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:- ಇಲ್ಲಿಯವರೆಗೆ ಏಕೆ ಕೊಡಲಿಲ್ಲ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಇಲ್ಲಿಯವರೆಗೆ ಏಕೆ ಕೊಡಲಿಲ್ಲವೆಂದರೆ, ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಹಣ ಬರಬೇಕಾಗಿತ್ತು.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಇವತ್ತು ಇವರಿಗೆ ರೈತರ ಬಗ್ಗೆ ಕಳಕಳಿಯಿಲ್ಲ, ಬೆಳೆವಿಮೆ ಹಣ ಕೊಡಲಿಕ್ಕೆ ಇವರಿಂದ ಆಗುತ್ತಿಲ್ಲ. ಮಾನ್ಯ ಫೋರ್ಟಿಸ್ ಆಸ್ಪತ್ರೆಯವರ ಕಂಪನಿಗೆ 46 ಕೋಟಿ ರೂಪಾಯಿಗಳನ್ನು ಕೊಡಲಿಕ್ಕಾಗುತ್ತದೆ. ಅವರ ಕಂಪನಿಗೆ ಮನ್ನಾ ಮಾಡಲಿಕ್ಕೆ ಆಗುತ್ತದೆ. ಆದರೆ ರೈತರಿಗೆ ಕೊಡಲಿಕ್ಕಾಗುತ್ತಿಲ್ಲ! ಆತ್ಮಹತ್ಯೆ ಮಾಡಿಕೊಂಡಿರುವ ರೈತರ ಕುಟುಂಬದವರಿಗೆ ಪರಿಹಾರ ಕೊಡುವುದಕ್ಕೆ ಆಗುತ್ತಿಲ್ಲ. ಸಾಲ ವಸೂಲಾತಿ ನಿಲ್ಲಿಸಲಿಕ್ಕೆ ಏನೂ ಹೇಳುತ್ತಿಲ್ಲ. ಬಡ್ಡಿ ಮನ್ನಾ ಮಾಡುತ್ತಿಲ್ಲ. ಸಾಲದ ಅವಧಿ ವಿಸ್ತರಣೆ ಮಾಡಲಿಕ್ಕೆ ತಯಾರಿಲ್ಲ, ಹೀಗಾಗಿ ಇವತ್ತು ರೈತರ ವಿರೋಧಿ ಧೋರಣೆಯನ್ನು ಈ ರಾಜ್ಯ ಸರ್ಕಾರ ಅನುಸರಿಸುತ್ತದೆ. ನಾವು ಇಷ್ಟೊಂದು ಚರ್ಚೆ ಮಾಡಿದ್ದರೂ ಸಹ ರಾಜ್ಯ ಸರ್ಕಾರ ರೈತರ ಬಗ್ಗೆ ಎಳ್ಳಷ್ಟು ಕಳಕಳಿ ವ್ಯಕ್ತಪಡಿಸಿಲ್ಲ. ಈ ರೈತ ವಿರೋಧಿ ಧೋರಣೆಯನ್ನು ನಾವು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಬಿಜೆಪಿ ಸದಸ್ಯರು ಸದನದಿಂದ ಹೊರ ನಡೆದರು)

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ):- ಮಾನ್ಯ ಅಧ್ಯಕ್ಷರೆ, ಕಳೆದ ಮೂರು ದಿನಗಳಿಂದ ಬರಗಾಲದ ಬಗ್ಗೆ ಚರ್ಚೆ ನಡೆದು ಈ ಚರ್ಚೆ ಸಂಪೂರ್ಣವಾಗಿ ಮಾನ್ಯ ಕಂದಾಯ ಮಂತ್ರಿಗಳಿಗೆ ಸಂಬಂಧಪಟ್ಟ ವಿಚಾರವಾಗಿದೆ. ನಾನು ಉದ್ದೇಶಪೂರ್ವಕವಾಗಿ ಮಾತನಾಡಲಿಲ್ಲ. ಏಕೆಂದರೆ, ಹಿಂದಿನ ಎರಡು ವರ್ಷಗಳಲ್ಲೂ ಬರಗಾಲದ ಬಗ್ಗೆ ಮಾತನಾಡುತ್ತಿದ್ದೆ. ನಂತರ ಕಂದಾಯ ಮಂತ್ರಿಗಳು ಎರಡು ಸಾರಿ ಏನು ಉತ್ತರ ಕೊಟ್ಟಿದ್ದರು ಈ ಸಾರಿನೂ ಅದೇ ಉತ್ತರ ಕೊಡುತ್ತಾರೆಂದು ನನಗೆ ಗೊತ್ತಿತ್ತು. ಹೀಗಾಗಿ ನಾವು ಎಷ್ಟೇ ಹೇಳಿದರೂ ಉತ್ತರ ಮಾತ್ರ ಒಂದೇ ರೀತಿ ಎಂದು ಗೊತ್ತಾದ ಮೇಲೆ ನಾನು ಮಾತನಾಡಲಿಕ್ಕೆ ಹೋಗಲಿಲ್ಲ. ಏಕೆಂದರೆ ಅವರ ಮಾತನಾಡತಕ್ಕಂಥ ಧಾಟಿಯೇ ನಮಗೆ ಗೊತ್ತು. ಇವರು ಈಗಾಗಲೇ ಎರಡು ಬರಗಾಲವನ್ನು ಎದುರಿಸಿದ್ದು ಈ ವರ್ಷ ಕೂಡ ಬರಗಾಲ ಬಂದಿದೆ. ಹೊಸ ವರ್ಷ ಪ್ರಾರಂಭವಾಗಿ 3-4 ತಿಂಗಳಾಯಿತು, ಈ ಒಂದು ಬರಗಾಲದ ಪರಿಸ್ಥಿತಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ? ಬೋರ್‌ವೆಲ್ ತೆಗೆಸುವುದಕ್ಕಾಗಿ, ಕುಡಿಯುವ ನೀರಿಗಾಗಿ, ಕೂಲಿಗಾಗಿ ಜನಗಳಿಗೆ ಯಾವ ರೀತಿ ಉದ್ಯೋಗ ಸೃಷ್ಟಿಸಿದ್ದಾರೆ? ಕೇಂದ್ರದಿಂದ ಎಷ್ಟು ಹಣ ಬಂದಿದೆ? ರಾಜ್ಯ ಸರ್ಕಾರದಿಂದ ಎಷ್ಟು ಹಣ ಬಿಡುಗಡೆ ಮಾಡಿದ್ದಾರೆ? ಈ ಎಲ್ಲಾ ವಿಚಾರಗಳನ್ನು ಹೇಳುತ್ತಾರೆಂದು ನಾನು